ಶ್ರೀ ಕುಡಚಿ ರಮೇಶ್ ಲಕ್ಷ್ಮಣ್	ಬೆಳಗಾಂ	ಕನ್ನಡ
ಶ್ರೀ ಎಸ್. ಕುಮಾರ್ ಬಂಗಾರಪ್ಪ	ಸೊರಬ	ಕನ್ನಡ
ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ	ಬೆಳ್ಳಾವಿ	ಕನ್ನಡ
ಶ್ರೀ ಲಾಲಜಿ ಆರ್. ಮೆಂಡನ್ (ಕಾಪು)	ಕಾಪು	ಕನ್ನಡ
ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ	ಅಥಣಿ	ಕನ್ನಡ
ಶ್ರೀ ಮಹದೇವ	ಕೃಷ್ಣರಾಜನಗರ	ಕನ್ನಡ
ಶ್ರೀ ಮಹಿಮಾ ಜೆ. ಪಟೇಲ್	ಚೆನ್ನಗಿರಿ	ಕನ್ನಡ
ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಕೂಬಾ	ಬಸವಕಲ್ಯಾಣ	ಕನ್ನಡ
ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ	ಪರಸಗಡ	ಕನ್ನಡ
ಶ್ರೀ ಮನೋಹರ್ ಕಲ್ಲಪ್ಪ ಕಿಣೇಕರ್	ಉಚಗಾಂವ್	ಮರಾಠಿ

12.30 ಪಿಎಂ

9. ಪ್ರಮಾಣವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮಲ್ಲಿ ತಿಳಿದುಕೊಳ್ಳಬೇಕು. ಪ್ರಮಾಣವಚನವನ್ನು ಯಾರ್ಯಾರ ಹೆಸರಿನಲ್ಲಿ ಬೇಕಾದರೂ ಮಾಡಬಹುದಾ? ಈ ಸದನಕ್ಕೆ ತಾವು ಸ್ವಲ್ಪ ತಿಳುವಳಿಕೆ ಕೊಡಬೇಕು. ಏಕೆಂದರೆ ಯಾರ ಹೆಸರಿನಲ್ಲಿ ಬೇಕಾದರೂ ಪ್ರಮಾಣ ವಚನ ತೆಗೆದುಕೊಳ್ಳಬಹುದಾ? ಸಂವಿಧಾನಬದ್ಧವಾಗಿ ಯಾರ ಹೆಸರಿನಲ್ಲಿ ಪ್ರಮಾಣ ಮಾಡಬೇಕು? ಭಗವಂತನ ಹೆಸರಿನಲ್ಲಿ ಮಾಡಬೇಕು, ಇಲ್ಲವೇ ಸತ್ಯ, ನಿಷ್ಠೆ ಹೆಸರಿನಲ್ಲಿ ಮಾಡಬೇಕು. ಅದನ್ನು ಬಿಟ್ಟರೆ ಊರಿನಲ್ಲಿರುವ ದೇವರುಗಳು, ಊರಿನಲ್ಲಿರುವ ತಂದೆ ತಾಯಿಗಳು, ಎಲ್ಲರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳಬಹುದಾ? ಇದೇನಿದು?

ಛೇರ್ಮನ್:– ಮಾನ್ಯ ವಾಟಾಳ್ ನಾಗರಾಜ್ ಅವರೇ, ತಾವು ಹಿರಿಯ ಸದಸ್ಯರು.

ಶ್ರೀ ವಾಟಾಳ್ ನಾಗರಾಜ್:– ದಯಮಾಡಿ, ತಾವು ಈ ಸದನಕ್ಕೆ ತಿಳುವಳಿಕೆ ಕೊಡಬೇಕು.

ಛೇರ್ಮನ್:– ಪ್ರಮಾಣ ವಚನ ಮಾಡುತ್ತಾರೆಯೇ ಹೊರತು, ಇದರಲ್ಲಿ ಇಲ್ಲದಿರುವುದನ್ನು ಪ್ರಮಾಣ ಮಾಡುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಎಲ್ಲಿದೆ ಹೇಳಿ? ಎಲ್ಲರ ಹೆಸರಿನಲ್ಲೂ ಪ್ರಮಾಣ ವಚನ ತೆಗೆದುಕೊಳ್ಳಬಹುದಾ?

ಛೇರ್ಮನ್:– ಪ್ರಮಾಣ ವಚನ ಇಂತಹದೇ ಭಾಷೆಯಲ್ಲಿ ಮಾಡಿ ಎಂದು ಕಂಡೀಷನ್ ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಯಾವ್ಯಾವ ಭಾಷೆಯಲ್ಲೋ ಮಾಡುತ್ತಿದ್ದಾರೆ, ಇದು ನನಗೆ ಅರ್ಥ ಆಗುತ್ತಿಲ್ಲ. ಇದು ಯಾವ ರಾಜ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಈ ರಾಜ್ಯದಲ್ಲಿ ಕರ್ನಾಟಕದಲ್ಲಿ ಗೆದ್ದು ಕನ್ನಡಿಗರ ಮತವನ್ನು ಪಡೆದು ಬೇರೆ ಭಾಷೆಯಲ್ಲಿ ಪ್ರಮಾಣ ತೆಗೆದುಕೊಳ್ಳುವುದು ನಾಚಿಕೆಗೇಡು.

ಗೊಂದಲ

ಶ್ರೀ ವಾಟಾಳ್ ನಾಗರಾಜ್:– ಈ ಕಡೆ ಎಲ್ಲರೂ ಮೌನವಾಗಿ ಕುಳಿತಿದ್ದಾರೆ. ತಾವು ಅಧ್ಯಕ್ಷರೂ ಮೌನವಾಗಿ ಕುಳಿತಿರತಕ್ಕದ್ದು ಒಳ್ಳೆಯ ನೀತಿಯಲ್ಲ. ಇದು ನಗುವಂತಹ ವಿಷಯವಲ್ಲ. ತಾವು ಸದನಕ್ಕೆ ಹೇಳಿ. ಯಾವ ಹೆಸರಿನಲ್ಲಿ ಬೇಕಾದರೂ ಪ್ರಮಾಣ ವಚನ ತೆಗೆದುಕೊಳ್ಳಬಹುದಾ? ಯಾವ ಭಾಷೆಯಲ್ಲಿ ಬೇಕಾದರೂ ಮಾತನಾಡಬಹುದಾ? ಈ ಬಗ್ಗೆ ತಾವು ಸದನಕ್ಕೆ ತಿಳುವಳಿಕೆ ಕೊಡಿ. ಇದಕ್ಕೆ ಅರ್ಥ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಛೇರ್ಮನ್ ಅವರೆ, ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡಿರುವಂಥದ್ದು ಸರಿಯಾದಂತಹ ವಿಚಾರವೇ ಆಗಿದೆ. ಸಂವಿಧಾನದ 188ನೇ ವಿಧಿಯ ಪ್ರಕಾರ ಅದೊಂದು ನಿರ್ದಿಷ್ಟಪಡಿಸಿದ ಭಗವಂತನ ಹೆಸರಿನಲ್ಲಿ ಅಥವಾ ಸತ್ಯದ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡತಕ್ಕದ್ದು ಎಂದಿದೆ. ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಿಯಮಾವಳಿಗಳು, ನಿಯಮ 5ರ ಕೆಳಗಡೆ ಕೂಡ, ಸಂವಿಧಾನ 188ನೇ ಅನುಚ್ಛೇದದ ಮೇರೆಗೆ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನವನ್ನು ಈಗಾಗಲೇ ತೆಗೆದುಕೊಂಡಿರುವಂತಹ ಸದಸ್ಯರು ಈ ಸಂಬಂಧದಲ್ಲಿ ಕಾರ್ಯದರ್ಶಿಯವರಿಗೆ ಪೂರ್ವಭಾವಿಯಾಗಿ ಲಿಖಿತ ಮೂಲಕ ಸೂಚನೆ ಕೊಟ್ಟ ತರುವಾಯ ಸದನದ ಅಧಿವೇಶನವು ಪ್ರಾರಂಭವಾದಾಗ, ಸದನದ ಅಧಿವೇಶನವು ನಡೆಯುವ ಯಾವುದೇ ದಿನದಲ್ಲಿ ಅಧ್ಯಕ್ಷರು ನಿರ್ದೇಶಿಸಬಹುದಾದಂತಹ ಇತರೆ ಯಾವುದೇ ಕಾಲದಲ್ಲಿ ಪ್ರಮಾಣ ವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ತೆಗೆದುಕೊಂಡು ಅದಕ್ಕೆ ತಮ್ಮ ರುಜುವನ್ನು ಹಾಕಬಹುದು ಎಂದು ಇದೆ. ಅದಕ್ಕೆ ಒಂದು ಪ್ರೊಫಾರ್ಮಾ ಇದೆ. ನಿಯಮ 188ರ ಕೆಳಗಡೆ ತಯಾರಾಗಿ ಇರತಕ್ಕಂಥದ್ದು. ಈಗ ಮಾನ್ಯ ಸದಸ್ಯರುಗಳು ಹೊಸಬರಾಗಿರುವುದರಿಂದ ತಾವು ಅಷ್ಟು ತೀಕ್ಷ್ಣವಾಗಿ ಪ್ರಸ್ತಾಪ ಮಾಡತಕ್ಕದ್ದು ಅಲ್ಲ. ಅದನ್ನು ಸರಿಪಡಿಸಿಕೊಳ್ಳತಕ್ಕಂಥ, ಅಂತರ್ಗತವಾದಂತಹ ಅಧಿಕಾರ ಮಾನ್ಯ ಸಭಾಪತಿಗಳಿಗೆ ಇದೆ.

ಛೇರ್ಮನ್:– ಬಹುಶಃ ಆಗಲೇ ರೂಲಿಂಗ್ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್:– ಆದರೆ ಮುಂದೆ ಸೂಚನೆ ಕೊಡುವಂತಹದು ಕೂಡ ಇದೆ. ಇದಾದ ನಂತರ ಸಂಸದೀಯ ಇಲಾಖೆಯವರು ಮತ್ತು ನಮ್ಮ ವಿಧಾನ ಮಂಡಲದ ಇಲಾಖೆಯವರು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮೂರು ದಿವಸದ ಅಥವಾ ಎಂಟು ದಿವಸದ ತರಬೇತಿಯನ್ನೂ ಕೂಡ ಕೊಡುತ್ತಾರೆ. ಎಲ್ಲರೂ ಕೂಡ ಅಲ್ಲಿ ಇರುವಂತಹ, ಏನು ವಿಧಿವತ್ತಾಗಿ ಬರೆದಿರುವಂತಹದು ಇದೆ, ಅದಕ್ಕೆ ಅನುಗುಣವಾಗಿಯೇ ಪ್ರತಿಜ್ಞೇಯನ್ನು ಸ್ವೀಕರಿಸಬೇಕು ಎಂದು ತಮ್ಮ ಅಪ್ಪಣೆ ಪಡೆದು ವಿನಂತಿ ಮಾಡುತ್ತಿದ್ದೇನೆ.

10. ಪ್ರಮಾಣ ವಚನ ಸ್ವೀಕಾರ (ಮುಂದು)

ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ	ಕಿತ್ತೂರ್	ಕನ್ನಡ
ಶ್ರೀ ಬಿ.ಆರ್. ಪಾಟೀಲ್	ಆಳಂದ	ಕನ್ನಡ
ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ	ಗುಳೇದಗುಡ್ಡ	ಕನ್ನಡ